ಅ) ಉತ್ತರ ಕನ್ನಡ ಜಿಲ್ಲೆಯಿಂದ ಎಷ್ಟು ಅರ್ಜಿಗಳು ಅಕಾಡೆಮಿ ಪ್ರಶಸ್ತಿ ಕೋರಿ ಬಂದಿದ್ದವು ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರ ಅರ್ಜಿಗಳ ಸಂಖ್ಯೆ ಎಷ್ಟು.

ಇ) ಉತ್ತರ ಕನ್ನಡ ಜಿಲ್ಲೆಗೆ ಸೇರಿದವರಲ್ಲಿ ಪ್ರಶಸ್ತಿ ಪಡೆದ ಹರಿಜನ ಗಿರಿಜನ ಹಿಂದುಳಿದ ಅಲ್ಪ ಸಂಖ್ಯಾತ ವಂಗಡಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).—

ಅ) ೧೧೭ ಜನರಿಗೆ.

ಆ) ಅಕಾಡೆಮಿಯು ಪ್ರಶಸ್ತಿಗಾಗಿ ಅರ್ಜಿಗಳನ್ನು ಸ್ವೀಕರಿಸುವ ಪದ್ಧತಿ ಜಾರಿಯಲ್ಲಿಲ್ಲ. ಸಾಹಿತ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ ಸಾಹಿತಿಗಳನ್ನು ಪ್ರತಿ ವರ್ಷ ಅಕಾಡೆಮಿಯು ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತಿದೆ.

ಇ) ಜಾತಿ ಆಧರಿಸಿ, ಅಕಾಡೆಮಿ ಪ್ರಶಸ್ತಿ ನೀಡುತ್ತಿಲ್ಲ.

ಮುಂಧೋಳ್ ತಾಲ್ಲೂಕು ಬೆಳಗಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿ

೯೩೬. ಶ್ರೀ ಬಿ. ಜಿ. ಜವಳಿ (ಮುಧೋಳ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ್ ತಾಲ್ಲೂಕು ಬೆಳಗಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕ ಯಾವಾಗ ಮಂಜೂರು ಆಯಿತು ?

ಆ) ಆಲ್ಲಿನ ಆಸ್ಪತ್ರೆಯ ನಿರ್ಮಾಣ ಯಾವಾಗ ಪೂರ್ತಿ ಆಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೨೩-೩-೧೯೮೨ರಂದು.

ಆ) ಈ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯು ಟೆಂಡರ್‌ಗಳನ್ನು ಕರೆದಿದೆ. ಗುತ್ತಿಗೆ ದಾರರನ್ನು ಗೊತ್ತುಪಡಿಸಿ ಕಟ್ಟಡದ ಕಾರ್ಯವನ್ನು ಕೈಗೊಂಡು ಪ್ರಾರಂಭಿಸಿದಂದಿನಿಂದ ಸುಮಾರು ೧ ಅಥವಾ ೧½ ವರ್ಷಗಳಲ್ಲಿ ಪೂರೈಸುವರು.

ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗೆ ಒಳಪಟ್ಟವರಿಗೆ ವಿಶ್ರಾಂತಿ ವೇತನ

೯೩೭. ಶ್ರೀ ಕೆ. ಕಾಶಾಲ(ಸುಳ್ಯ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಹಾಗೂ ಶಸ್ತ್ರ ಕ್ರಿಯೆಯನ್ನು ಪಡೆದ ಪಡೆಯಲಿರುವ ಅರ್ಹ ಬಡ ದಂಪತಿಗಳಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಟ್ಟವರಿಗೆ ಮಾಸಿಕ ರೂ. ೫೦-೦೦ ಅಥವಾ ಒಕ್ಕರಂತೆ ವಿಶ್ರಾಂತಿ ವೇತನ ನೀಡುವ ವ್ಯವಸ್ಥೆಯನ್ನು ಮಾಡಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯಲ್ಲಿರುವ ಸಾರ್ವತ್ರಿಕ ಆಸ್ಪತ್ರೆಯ ಕುರಿತು.

೯೩೮. ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿರ್ಸಿ ಸಾರ್ವಜನಿಕ ಆಸ್ಪತ್ರೆಗೆ ಸರ್ಕಾರದವರಿಂದ ಏನಾದರೂ ಹಣ ಮಂಜೂರಾಗಿದೆಯೇ ?

ಅ) ಹಾಗಿದ್ದಲ್ಲಿ ಮಂಜೂರಾಗಿದ್ದರೆ ಅದರಿಂದ ಏನೇನು ಕೆಲಸ ಮಾಡಲಾಗಿದೆ, ಮತ್ತು ಆಸ್ಪತ್ರೆಗೆ ಬೇಕಾದ ಉಪಕರಣಗಳು ಇಲ್ಲದೆ ಜನರಿಗೆ ತೊಂದರೆ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಮೇಲ್ಕಂಡ ಆಸ್ಪತ್ರೆಯ ಶಸ್ತ್ರ ಚಿಕಿತ್ಸಕರನ್ನು ಸರ್ಜನರನ್ನು ಬೇರೆ ಕಡೆ ವರ್ಗ ಮಾಡಲು ಕಾರಣಗಳೇನು ?

ಈ) ಹಾಗಿದ್ದಲ್ಲಿ ಶಸ್ತ್ರ ಚಿಕಿತ್ಸಕರಿಲ್ಲದೆ ಎಷ್ಟು ಕಾಲವಾಯಿತು ಹಾಗೂ ಈ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮಂತ್ರಿಗಳು).—

ಅ) ಹೌದು.

ಆ) ರೋಗಿಗಳಿಗೆ ಚಿಕ್ಸಿತೆನಿಯನ್ನು ನೀಡಿದೆ. ಇಲ್ಲ

ಇ) ಆಡಳಿತಾತ್ಮಕ ಕಾರಣಗಳಿಗಾಗಿ

ಈ) ೧೪ ತಿಂಗಳುಗಳು. ಈ ಸ್ಥಳದಲ್ಲಿ ಬೇರೆ ವೈದ್ಯರನ್ನು ಹಾಕಲಾಗಿದೆ.

ಬಂಟವಾಳ ಕ್ಷೇತ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳ ಭರ್ತಿ ಬಗ್ಗೆ

೧೪೪೯. ಶ್ರೀ ಬಿ. ರಾಮನಾಥರೈ(ಬಂಟವಾಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಂಟವಾಳ ಕ್ಷೇತ್ರದ ಕೊಂಪದವು, ವಾಮನ ಪದವು, ದೇವಸ್ಥಳ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರಲು ಕಾರಣವೇನು ?

ಇ) ಸರ್ಕಾರದವರು ಸದರಿ ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಗಳನ್ನು ಶೀಘ್ರದಲ್ಲಿ ನೇಮಿಸುವರೆ ?

ಶ್ರೀ ಎಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿದೆ.

ಆ) ವೈದ್ಯರ ಅಭಾವದಿಂದ ತುಂಬಲಾಗಲಿಲ್ಲ.

ಇ) ಆದಷ್ಟು ಶೀಘ್ರವಾಗಿ ನೇಮಿಸಲಾಗುವುದು.

Taking over Rural Dispansaries run by TDBS

1122 SRI K. VASANTA BANGER(Belthangadi) —Will the Minister for Health be please to state).—

a) Whether the Government proposes to take over the Rural Dispensaries run by the erstwhile Taluk Development Boards ?

b) Whether the doctors and staff working in the dispensaries be absorbed in Health Department on regular basis ?

SRI H. L. THIMME GOWDA(Health and Family Welfare).—

a) 605 Dispensaries then run by the T.D,B. I Municipalities have already been taken over by the Goverument.

b) The staff and the doctors who fulfilled the terms and condition laid down in the relevant Government Orders, have been absorbed into Government service.